# ಕುವೆಂಪು ವಿಶ್ವವಿದ್ಯಾಲಯ

ನಿರ್ದೇಶಕರ ಕಾರ್ಯಾಲಯ,

ದೂರ ಶಿಕ್ಷಣ ನಿರ್ದೇಶನಾಲಯ

ಜ್ಞಾನಸಹ್ಯಾದ್ರಿ ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ

ದೂರವಾಣಿ-08282-256450, ಫ್ಯಾಕ್ಸ್: 256370, ಇ-ಮೇಲ್: info@kuvempuuniversitydde.org


ಸಂಖ್ಯೆ:ಕುವಿ/ದೂಶಿನಿ-2/2018-19/ 136 ದಿನಾಂಕ: 16.04.2018

## ಅಧಿಸೂಚನೆ

ವಿಷಯ:- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪದವಿಗಳ ಮಾನ್ಯತೆ ಕುರಿತು.

ಉಲ್ಲೇಖ:-1) ಕರ್ನಾಟಕ ಸರ್ಕಾರದ ನಡಾವಳಿ ಮತ್ತು ಸರ್ಕಾರಿ ಆದೇಶ ಸಂಖ್ಯೆ : ಇಡಿ 54 ಯುಓವಿ 2017 (ಭಾಗ-1), ಬೆಂಗಳೂರು, ದಿನಾಂಕ 05.03.2018

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 12-04-2018

-0-

ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಈ ಹಿಂದೆ ತನ್ನ ಪತ್ರಿಕಾ ಪ್ರಕಟಣೆಯಲ್ಲಿ (ಪ್ರಕಟಣೆ ಸಂಖ್ಯೆ : **F.No.UGC/DEB8/KSOU/1/2015 dt. 16.06.2015**) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಶ್‌ಪಾಲ್ ಶರ್ಮ V/s ಛತ್ತೀಸ್‌ಗಡ ಸರ್ಕಾರದ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧವಾಗಿ ಕರ್ನಾಟಕ ರಾಜ್ಯದ ಭೌಗೋಳಿಕ ವ್ಯಾಪ್ತಿಯ ಹೊರಗೆ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೆ ತಾಂತ್ರಿಕ ಮತ್ತು ವೃತ್ತಿಪರ ಕೋರ್ಸ್‌ಗಳನ್ನು ನಡೆಸುತ್ತಿರುವುದರಿಂದ 2013-14 ನೇ ಸಾಲಿನಿಂದ ಅನ್ವಯವಾಗುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಹಿಂಪಡೆದಿರುತ್ತದೆ.

ಉಲ್ಲೇಖಿತ ಸರ್ಕಾರದ ಆದೇಶದ ಎರಡನೆ ಪ್ಯಾರಾದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2013 ರ ಸಾಲಿನ ಪೂರ್ವದಲ್ಲಿ ಪ್ರವೇಶಾತಿ ಪಡೆದು ಉತ್ತೀರ್ಣರಾಗಿ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳನ್ನು ಪಡೆಯದೆ ಇರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ / ಅಂಕಪಟ್ಟಿಗಳನ್ನು ವಿತರಿಸಲು ಹಾಗೂ ತಾಂತ್ರಿಕೇತರ ಕೋರ್ಸ್‌ಗಳಲ್ಲಿ ಹಲವು ಬ್ಯಾಚ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಹಾಗೂ ಕೋರ್ಸ್‌ಗಳನ್ನು ಅಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೂ ಸಹ ವ್ಯಾಸಂಗ ಮುಂದುವರೆಸಲು ಹಾಗೂ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಲು ಪರಿನಿಯಮಾವಳಿ ಅನ್ವಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಅಗತ್ಯ ಕ್ರಮವಹಿಸಲು ಆದೇಶಿಸಿರುತ್ತದೆ. ಹಾಗೂ ಉಲ್ಲೇಖಿತ ಆದೇಶದ ಪ್ರತಿಯನ್ನು ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರಿಗೂ ಸಹ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ಪ್ರಸ್ತುತ 2012-13 ಹಾಗೂ ಅದಕ್ಕೂ ಹಿಂದಿನ ಅಂಕಪಟ್ಟಿಗಳನ್ನು ಮಾತ್ರ ಪರಿಗಣಿಸಿ ವಿವಿಧ ಪದವಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಪದವಿ ಪಡೆದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ದೂರ ಶಿಕ್ಷಣ ನಿರ್ದೇಶನಾಲಯವನ್ನು ನಿರಂತರವಾಗಿ ಸಂಪರ್ಕಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಮುಖವಾಗಿ ಸರ್ಕಾರದ ಉಲ್ಲೇಖಿತ ನಡಾವಳಿ ಹಾಗೂ ಆದೇಶ, ವಿದ್ಯಾರ್ಥಿಗಳ ಬೇಡಿಕೆ, ಶೈಕ್ಷಣಿಕ ಹಿತದೃಷ್ಟಿ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಸರ್ವರಿಗೂ ಉನ್ನತ ಶಿಕ್ಷಣ ಎಂಬ ಧ್ಯೇಯದೊಂದಿಗೆ ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ 2017-18 ರ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಯಾವುದೆ ವರ್ಷದಲ್ಲಿ ಪದವಿ ಪಡೆದ ಅರ್ಹ ವಿದ್ಯಾರ್ಥಿಗಳಿಂದ ಉನ್ನತ ವ್ಯಾಸಂಗಕ್ಕಾಗಿ ತಾಂತ್ರಿಕೇತರ

(**Non-Technical courses only**) ಲಭ್ಯ ಕೋರ್ಸ್‌ಗಳಿಗೆ ಪ್ರವೇಶ ಅರ್ಜಿಗಳನ್ನು ಅಂಗೀಕರಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು ಆನ್ ಲೈನ್ ಮೂಲಕ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಪ್ರವೇಶ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆದರೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ದಿಂದ ನಡೆಸಲಾಗುವ 10+2 ನ ಸೇತುಬಂಧ ಪರೀಕ್ಷೆ ( **Bridge Course exam**) ಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ. ವಿವರಗಳಿಗೆ ಕುವೆಂಪು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯದ ಅಧಿಕೃತ ಜಾಲತಾಣ **www.kuvempuuniversitydde.org** ಯನ್ನು ಸಂಪರ್ಕಿಸಬಹುದಾಗಿದೆ.

ಆದೇಶದ ಮೇರೆಗೆ,

ನಿರ್ದೇಶಕರು.

ನಿರ್ದೇಶಕರು
ದೂರ ಶಿಕ್ಷಣ ನಿರ್ದೇಶನಾಲಯ
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451 16/4

ಗೆ :

ದೂರ ಶಿಕ್ಷಣ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧಿಕೃತ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳಿಗೆ.

ಪ್ರತಿ :

1. ಸರ್ಕಾರದ ಅಧೀನ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ ಇಲಾಖೆ), ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001 ಮಾಹಿತಿಗಾಗಿ
2. ಆಪ್ತ ಸಹಾಯಕರು – ಮಾನ್ಯ ಕುಲಪತಿಗಳು/ ಕುಲಸಚಿವರು/ ಹಣಕಾಸು ಅಧಿಕಾರಿಗಳು, ನಿರ್ದೇಶಕರು (ದೂಶಿನಿ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ಕುಲಸಚಿವರು (ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4. ಎಲ್ಲಾ ವಿಷಯ ನಿರ್ವಾಹಕರು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ.
5. ವಿಷಯ ನಿರ್ವಾಹಕರು, ಕಂಪ್ಯೂಟರ್ ವಿಭಾಗ, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ – ದೂರ ಶಿಕ್ಷಣ ನಿರ್ದೇಶನಾಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಣೆ ನೀಡಲು ಕ್ರಮಕೈಗೊಳ್ಳುವುದು.
6. ಸಂಪರ್ಕಾಧಿಕಾರಿಗಳು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ
7. ಎಲ್ಲಾ ಸಂಶೋಧನಾ ಮತ್ತು ಬೋಧನಾ ಸಹಾಯಕರು, ದೂರ ಶಿಕ್ಷಣ ನಿರ್ದೇಶನಾಲಯ, ಶಂಕರಘಟ್ಟ.
8. ವಿಶ್ವವಿದ್ಯಾಲಯದ ಎಲ್ಲಾ ಪ್ರಕಟಣಾ ಫಲಕಗಳಿಗೆ.
9. ಕಛೇರಿ ಪ್ರತಿ.